ಶ್ರೀ ಎಂ. ಚಂದ್ರಶೇಖರ್.—ನಮ್ಮ ಕಾನೂನು ಮತ್ತು ಸಂಸದೀಯ ಮಂತ್ರಿಗಳು ಇದ್ದಾರೆ, ಅವರು ಲೆವಿನ್ಯೂ ಮಂತ್ರಿಗಳು ಇವರಿಬ್ಬರ ಜೊತೆ ವಿಚಾರ ವಿಮರ್ಶೆ ಮಾಡಿ ಆದಷ್ಟು ಬೇಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಆರ್. ನೀಲಕಂಠಪ್ಪ (ಅಬ್ಸೆಂಟ್)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳ ಪಟ್ಟಿ

ತಾಲ್ಲೂಕು ಪಂಚಾಯತ್‌ಗಾಗಿ ನಿಯಮಗಳನ್ನು ರಚಿಸುವುದು

೧೨೨೩. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಲಕ್ಷ್ಮಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ ಶಾಸನದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿಯ ಕಾರ್ಯಕಲಾಪಗಳನ್ನು ನಡೆಸುವಲ್ಲಿ ವಿವರವಾದ ನಿಯಮಾವಳಿಗಳನ್ನು ರೂಪಿಸದೇ ಇರುವುದರಿಂದ ಅಧ್ಯಕ್ಷರುಗಳಿಗೆ ಕೆಲಸ ನಿರ್ವಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಸದರಿ ನಿಯಮಾವಳಿಗಳನ್ನು ರಚಿಸಲು ಯೋಜನೆಯೇನಾದರೂ ಇದೆಯೆ,

ಇ) ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಕಲಂ ೧೩೬ರಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿಗಳ ಕಾರ್ಯಗಳ ಬಗ್ಗೆ ಹೇಳಿದೆ. ಸಭೆಗಳನ್ನು ನಡೆಸುವ ಬಗ್ಗೆ ಕರ್ನಾಟಕ ತಾಲ್ಲೂಕು ಪಂಚಾಯತಿ ಸಮಿತಿಗಳ (ಟ್ರಾನ್ಸಾಕ್ಷನ್ ಆಫ್ ಬಿಸಿನೆಸ್) ನಿಯಮಗಳು ೧೯೮೬ನ್ನು ರಚಿಸಲಾಗಿದೆ.

ಇ) ''ಅ'' ಉತ್ತರಿಸಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿ

ಬೆಳಗಾಂ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟ ಯೋಜನೆ

೧೨೫೯. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ್).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ಮತ್ತು ಲಕ್ಷ್ಮಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬, ೧೯೮೬-೮೭ ಹಾಗೂ ೧೯೮೭-೮೮ನೇ ಸಾಲುಗಳಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟ ಯೋಜನೆ ಮೇರೆಗೆ ಬಿಡುಗಡೆ ಮಾಡಲಾದ ಮೊತ್ತ.

ಆ) ಸದರಿ ಪ್ರತಿಯೊಂದು ಸಾಲುಗಳಲ್ಲಿ ವೆಚ್ಚವಾದ ಮೊತ್ತವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ಮತ್ತು ಲಕ್ಷ್ಮಿ ಮಂತ್ರಿಗಳು).—

ಅ) ಸಾಲುವಾರು ಬಿಡುಗಡೆ ಮಾಡಿದ ಮೊತ್ತದ ವಿವರ (ಲಕ್ಷ ರೂಗಳಲ್ಲಿ)

೧೯೮೫-೮೬	೫೬.೮೨
೧೯೮೬-೮೭	೭೨.೯೪
೧೯೮೭-೮೮	೭೦.೦೦